# ಮಕ್ಕಳಿಗಾಗಿ ಬೈಬಲ್

## ಅರ್ಪಿಸುವ



# ಯೋನ ಮತ್ತು ದೊಡ್ಡ ಮೀನು


ಬರಹಗಾರರು: Edward Hughes

ಚಿತ್ರಲೇಖಕರು: Jonathan Hay

ಪದ್ಮಾ ಸೈಲೇಸ್: Vinay Shirol

ಅಳವಡಿಸುವವರು: Mary-Anne S.


60ರ 26ನೇ ಕಥೆ


**www.M1914.org**

***Bible for Children,*** *PO Box 3, Winnipeg, MB R3C 2G1 Canada*



ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.
ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.


ಕನ್ನಡ

Kannada

ಬಹು ವರ್ಷಗಳ ಹಿಂದೆ, ಯೋನನೆಂಬ ಒಬ್ಬ ಮನುಷ್ಯನು ಇಸ್ರೇಯೇಲ ದೇಶದಲ್ಲಿ ಇದ್ದನು. ಒಂದು ದಿನ, ದೇವರು ಅವನಿಗೆ ದೊಡ್ಡ ಪಟ್ಟಣವಾದ ನಿನೆವೆಗೆ ಹೋಗು ಎಂದು ಹೇಳಿದರು.



1

ಅದು ಪ್ರಪಂಚದಲ್ಲಿಯೇ ಅತೀ ಬಲಿಷ್ಠವಾದ ಪಟ್ಟಣವಾಗಿತ್ತು.



2


ಯೋನನು ಆ ಜನರಿಗೆ ಅವರು ಎಷ್ಟು ದುಷ್ಟರಾಗಿದ್ದಾರೆ
ಎಂಬುದು ದೇವರಿಗೆ ತಿಳಿದಿದೆ ಎಂದು ಅವರನ್ನು
ಎಚ್ಚರಿಸಬೇಕಾಗಿತ್ತು.
3


ಯೋನನು ದೇವರಿಗೆ ಅವಿಧೇಯನಾದನು!
ನಿನೆವೆಗೆ ಹೋಗುವುದರ ಬದಲಾಗಿ ಅದಕ್ಕೆ
ವಿರುದ್ಧ ದಿಕ್ಕಿನಲ್ಲಿ ಇರುವ ತಾರ್ಷಿಷ ಎಂಬ
ಪಟ್ಟಣಕ್ಕೆ ಹಡಗಿನಲ್ಲಿ ತೆರಳಿದನು.
4


ಯೆಹೋವ ದೇವರು ಸಮುದ್ರದ ಮೇಲೆ ದೊಡ್ಡ ಬಿರುಗಾಳಿಯನ್ನು
ಕಳುಹಿಸಿದನು. ಅಲ್ಲಿ ದೊಡ್ಡ ತುಪಾನು ಬೀಸಲು ಶುರುವಾಯಿತು. ಆಗ
ನಾವಿಕರ ಹಡಗು ಒಡೆದು ಮುಣುಗಿ ಹೋಗಬಹುದೆಂದು ಹೆದರಿದರು.
5


ತುಪಾನ ಹೆಚ್ಚುತ್ತಾ ಹೆಚ್ಚುತ್ತಾ ಹೋಯಿತು. ಭಯಭೀತರಾದ ನಾವಿಕರು ತಮ್ಮ
ತಮ್ಮ ದೇವರುಗಳಿಗೆ ಮೊರೆ ಇಟ್ಟರು. ಹಾಗೆ ಹಡಗನ್ನು ಹಗುರ ಮಾಡಲು
ಸಾಮಾನುಗಳನ್ನು ಸಮುದ್ರಕ್ಕೆ ಬಿಸಾಡಿ ಬಿಟ್ಟರು. ಆದರೆ ಅದರಿಂದ ಯಾವುದೇ
ಸಹಾಯವಾಗಲಿಲ್ಲ.
6


ಹಡಗಿನಲ್ಲಿ ಯೋನನೊಬ್ಬನೇ ಪ್ರಾರ್ಥಿಸುತ್ತಿರಲಿಲ್ಲ. ಪ್ರಾರ್ಥಿಸುವುದರ ಬದಲು
ಹಡಗಿನ ಒಳ ಭಾಗಕ್ಕೆ ಇಳಿಯ ಮಲಗಿಕೊಂಡಿದ್ದನು. ಗಾಡನಿದ್ರೆ ಹತ್ತಿತ್ತು.
ಹಡಗಿನ ಯಜಮಾನನು ಅವನನ್ನು ನೋಡಿದನು. ಇದೇನು ನಿದ್ದೆ
ಮಾಡುತ್ತಿದ್ದಿಯೋ ಎದ್ದೇಳು! ನಿನ್ನ ದೇವರಿಗೆ ಮೊರೆ ಇಡು!
ಒಂದು ವೇಳೆ ನಿನ್ನ ದೇವರು ನಮ್ಮ ಬಗ್ಗೆ
ಯೋಚಿಸಬಹುದು ನಾಶವಾಗದೇ
ನಾವು ಉಳಿಯಬಹುದು.
7


ಈ ನಾವಿಕರು ಅವರಿಗೆ ಸಂಭವಿಸಿದ ಕೇಡಿಗೆ ಕಾರಣ ಯೋನನಿರಬಹುದೆಂದು
ನಿರ್ಧರಿಸಿದರು. ಅವನು ಅವರಿಗೆ ‘ನಾನು ದೇವರಿಂದ ಓಡಿ ಹೋಗುತ್ತಿದ್ದೇನೆ’
ಎಂದು ಹೇಳಿದನು.
8

"ನಮ್ಮ ಮೇಲೆ ಎದ್ದಿರುವ ಸಮುದ್ರವು ಶಾಂತವಾಗುವ ಹಾಗೆ ನಾವು ಏನು ಮಾಡಬೇಕು" ಎಂದು ಕೇಳಿದರು? ಅದಕ್ಕೆ ಅವನು ಅವರಿಗೆ "ನನ್ನನ್ನು ಎತ್ತಿ ಸಮುದ್ರಕ್ಕೆ ಎಸೆಯಿರಿ" ಎಂದುತ್ತರಕೊಟ್ಟನು. "ನನ್ನ ನಿಮಿತ್ತವೇ ಈ ದೊಡ್ಡ ತುಪಾನು ನಿಮಗೆ ಸಂಭವಿಸಿತು".



9

ನಾವಿಕರು ಯೋನನನ್ನು ಸಮುದ್ರಕ್ಕೆ ಎಸೆಯಲು ಒಪ್ಪಲಿಲ್ಲ ದಡಕ್ಕೆ ಹಿಂದಿರುಗಬೇಕೆಂದು ಕಷ್ಟಪಟ್ಟು ಹುಟ್ಟು ಹಾಕುತ್ತಾ ಬಂದರೂ ಸೇರಲು ಆಗಲಿಲ್ಲ. ಅವರು ಮಾಡಲಿಕ್ಕೆ ಒಂದೇ ಒಂದು ವಿಷಯ ಉಳಿದಿತ್ತು!



10

ಕ್ಷಮೆಗಾಗಿ ಪ್ರಾರ್ಥಿಸಿದ ನಂತರ ನಾವಿಕರು ಯೋನನನ್ನು ಎತ್ತಿ ಸಮುದ್ರಕ್ಕೆ ಎಸೆದರು. ಯೋನನು ಅಲೆಗಳು ಕೆಳಗೆ ಮರೆಯಾಗುತ್ತಿದ್ದಂತೆ ಸಮುದ್ರವು ತನ್ನ ರೌದ್ರವನ್ನು ನಿಲ್ಲಿಸಿಬಿಟ್ಟಿತು.



11

ಕೂಡಲೇ ಬದಲಾದ ವಾತಾವರಣ ನೋಡಿ ನಾವಿಕರು ತುಪಾನಿಗಿಂತ ಬಹಳ ಭಯಪಟ್ಟರು. ಅವರು ಇದು ದೇವರಿಂದ ಮಾತ್ರ ಸಾಧ್ಯವೆಂದು ತಿಳಿದಿರಬಹುದು. ಭಯದಲ್ಲಿ ಆಶ್ಚರ್ಯಪಡುತ ದೇವರನ್ನು ಆರಾಧಿಸಿದರು.



12

ಅಷ್ಟರಲ್ಲಿ, ಅವಿದೇಯನದ ಯೋನನಿಗೆ ದೊಡ್ಡ ಆಶ್ಚರ್ಯಕರವಾದ ಸಂಗತಿ ಕಾದಿತ್ತು. ಸಹಾಯವಿಲ್ಲದೆ ಸಮುದ್ರದ ಆಳಕ್ಕೆ ಮುಳುಗುತ್ತಿದ್ದ ಯೋನನಿಗೆ, ಅವನನ್ನು ಮುಳುಗುವುದರಿಂದ ಯಾರು ರಕ್ಷಿಸಲಾರರು ಎಂದು ಅವನಿಗೆ ತಿಳಿದಿತ್ತು. ಅವನು ಸಹ ಮುಳುಗಬಹುದಾಗಿತ್ತು ಆದರೆ ದೇವರ ಆಲೋಚನೆಯೇ ಬೇರೆ ಇತ್ತು.



13

ದೇವರು ಯೋನನನ್ನು ನುಂಗಲು ಒಂದು ದೊಡ್ಡ ಮೀನನ್ನು ಸಿದ್ಧ ಮಡಿದರು. ಮೀನು ಸರಿಯಾದ ಸಮಯದಲ್ಲಿ ಇತ್ತು! ಒಂದು ಗುಳಿಕಿನಲ್ಲಿ ಸಮುದ್ರದಲಿದ್ದಯೋನನು ಮೀನಿನ ಹೊಟ್ಟೆಯಲ್ಲಿ ಸೇರಿ ಮೀನಿನ ಹೊಟ್ಟೆಯಲ್ಲಿ ಯೋನನು ಮೂರುದಿನ ಇದ್ದನು. ಅಲ್ಲಿ ಅವನಿಗೆ ಯೋಚಿಸಲು ಮತ್ತು ಪ್ರಾರ್ಥಿಸಲು ಸಮಯವಿತ್ತು.



14

ಮೂರು ದಿನಗಳ ನಂತರ, ಯೋನನು ಕೊನೆಗೂ ದೇವರ ಮಾತಿಗೆ ವಿಧೇಯನಾಗುವೆನೆಂದು ಹೇಳಿದನು. ಆ ಕ್ಷಣವೇ ದೇವರು ಮೀನಿಗೆ ಜೋತೆ ಆಜ್ಞಾಪಿಸಿದರು. ಅದು ಯೋನನನ್ನು ಒಣನೆಲದಲ್ಲಿ ಕಾರಿ ಬಿಟ್ಟಿತು.



15

ಮತ್ತೊಂದು ಸಾರಿ, ದೇವರು ಯೋನನಿಗೆ ನಿನೆವೆ ಪಟ್ಟಣಕ್ಕೆ ಹೋಗಿ ವಾಕ್ಯವನ್ನು ಸಾರು ಎಂದು ಹೇಳಿದನು. ಈ ಬಾರಿ ಯೋನನು ನಿನೆವೆಗೆ ಹೋದನು. ಪಟ್ಟಣದೊಳಗೆ ಹೋಗುತ್ತಿದ್ದಂತೆ ‘ಇನ್ನು ನಲವತ್ತು ದಿನಗಳಲ್ಲಿ ನಿನೆವೆಯು ಕಡವಲ್ಪಡುವದು’ ಎಂದು ಕೂಗಿ ಹೇಳ ತೊಡಗಿದನು.



16

ನಿನೆವೆ ಜನರು ದೇವರ ವಾಕ್ಯವನ್ನು ಕೇಳಿದರು. ಅವರು ಮಾಡಿದ ಪಾಪಗಳಿಗೆ ಪಶ್ಚಾತ್ತಾಪ ಪಡುತ್ತಿದ್ದಾರೆ ಎಂದು ದೇವರಿಗೆ ತೋರಿಸಲು ಉಪವಾಸ ಮಾಡಿ ಗೋಣಿ ತಟ್ಟನ್ನು ಸುತ್ತಿಕೊಂಡರು. ಅರಸನು ಕೂಡ ದೇವರಿಗೆ ದೀನನಾದನು. ಅವನು ಸಿಂಹಾಸನದಿಂದ ಎದ್ದು ತನ್ನ ನಿಲುವಂಗಿಯನ್ನು ತೆಗೆಯಬಿಟ್ಟು ಗೋಣಿತಟ್ಟನ್ನು ಸುತ್ತಿಕೊಂಡು ಬೂದಿಯಲ್ಲಿ ಕೂತನು. ಅರಸನು ಎಲ್ಲರಿಗೂ ತಮ್ಮ ದುರ್ಮಾರ್ಗ ಹಾಗೂ ಹಿಂಸೆಯನ್ನು ಬಿಟ್ಟು ದೇವರನ್ನು ಒಂದು ವೇಳೆ ದೇವರು ಅವರನ್ನು ಕ್ಷಮಿಸಬಹುದು ಎಂದು ಪ್ರಾರ್ಥಿಸಲು ಆಜ್ಞಾಪಿಸಿದನು.



17

ದೇವರು ಅವರನ್ನು ಕ್ಷಮಿಸಿದರು! ನಿನೆವೆ ಜನರು ದೇವರು ಅವರನ್ನು ಕ್ಷಮಿಸಿದ್ದಾರೆ ಎಂದು ಗ್ರಹಿಸಿದಾಗ ಆ ದಿನವು ಬಹು ಸಂತೋಷಕರವಾಗಿರಬಹುದು.

ಆದರೆ ಒಬ್ಬ ವ್ಯಕ್ತಿ ಮಾತ್ರ ಕೋಪಗೊಂಡಿದ್ದನು ಆತನೆ ಯೋನ!.



18

ಯಾಕೆ ಯೋನನು ಕೋಪಗೋಂಡನು? ಅವನು ದೇವರಿಗೆ “ನನಗೆ ಗೊತ್ತಿತ್ತು ನೀನು ದಯೆಯೂ, ಕನಿಕರವೂ, ದೀರ್ಘ ಶಾಂತಿಯೂ, ಮಹಾಕೃಪೆಯೂ ಉಳ್ಳದೇವರು”. ಎಂದು ಹೇಳಿದನು. ಇನ್ನೊಂದು ಮಾತೇನೆಂದರೆ ಯಾರು ತಮ್ಮಪಾಪಗಳಿಗೆ ಪಶ್ಚಾತ್ತಾಪ ಪಟ್ಟು ದೇವರ ಮಾತಿಗೆ ವಿದೇಯರಾಗುತ್ತಾರೋ ಅವರನ್ನು ದೇವರು ಯಾವಾಗಲೂ ಕ್ಷಮಿಸುತ್ತಾರೆ ಎಂದು ಯೋನನಿಗೆ ತಿಳಿದಿತ್ತು. ಯೋನನಿಗೆ ನಿನೆವೆಯ ಜನರೆಂದರೆ ಇಷ್ಟವಿರಲಿಲ್ಲ ಎಂದು ಕಾಣುತ್ತದೆ. ದೇವರು ಅವರನ್ನು ಕ್ಷಮಿಸುವುದನ್ನು ಅವನು ಇಷ್ಟಪಡಲಿಲ್ಲ.



19

ಯೋನನು ದೇವರ ಮೇಲೆ ತುಂಬ ಕೋಪಿಸಿಕೊಂಡು “ನನ್ನ ಪ್ರಾಣವನ್ನು ತೆಗೆ; ನಾನು ಬದುಕುವುದಕ್ಕಿಂತ ಸಾಯುವುದೇ ಲೇಸು” ಎಂದು ಹೇಳಿದನು.



20













ಯೋನ ಮತ್ತು ದೊಡ್ಡ ಮೀನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಯೋನ

**"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."**
**ಕೀರ್ತನೆ 119:130**

ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.

ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.

ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ 3:16

ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.